ದೊರಕುವುದಿಲ್ಲ. ಈ ಪರಿಸ್ಥಿತಿಯೇ ಸಕ್ಕರೆ ಕಾಯಿಲೆ. ಇನ್ಸುಲಿನ್ ಉತ್ಪಾದನಾ ಕೊರತೆಯಿಂದ ಸಕ್ಕರೆ ಕಾಯಿಲೆ ಎಂಬ ಸ್ಥಿತಿ ಉಂಟಾಗುತ್ತದೆ.

## ಸಕ್ಕರೆ ಕಾಯಿಲೆಯ ವೈವಿಧ್ಯ

ಸಕ್ಕರೆ ಕಾಯಿಲೆಯಲ್ಲಿಯೂ ಕೆಲ ನಮೂನೆಗಳಿವೆ. ಅವುಗಳಲ್ಲಿ ಅತಿಮುಖ್ಯವಾದವುಗಳೆಂದರೆ 1. ಇನ್ಸುಲಿನ್ ಅವಲಂಬಿತ (ಟೈಪ್ 1) 2. ಇನ್ಸುಲಿನ್ ಅವಲಂಬಿತವಲ್ಲದ ಸಕ್ಕರೆ ಕಾಯಿಲೆ (ಟೈಪ್ 2). ಇದರಲ್ಲಿ ಮೊದಲನೆ ವಿಧದ ಸಕ್ಕರೆ ಕಾಯಿಲೆಯಲ್ಲಿ ಇನ್ಸುಲಿನ್ ಉತ್ಪಾದಕ ಗ್ರಂಥಿಗಳು ಸಂಪೂರ್ಣವಾಗಿ ನಾಶವಾಗಿರುತ್ತದೆ. ದೇಹದಲ್ಲಿ ಸ್ವಲ್ಪವೂ ಇನ್ಸುಲಿನ್ ಉತ್ಪಾದನೆ ಆಗುವುದಿಲ್ಲ. ಇಂಥ ರೋಗಿಗಳು ಜೀವನ ಪರ್ಯಂತ ಇನ್ಸುಲಿನ್ ಇಂಜೆಕ್ಷನ್ ತೆಗೆದುಕೊಳ್ಳುತ್ತಲೇ ಬದುಕಿರಬೇಕಾಗುತ್ತದೆ.

ಭಾರತದಲ್ಲಿ ಬಹಳಷ್ಟು (ಶೇಕಡಾ 95) ಸಕ್ಕರೆ ಕಾಯಿಲೆಯವರು, ಇನ್ಸುಲಿನ್ ಅವಲಂಬಿತವಿರದ ಸಕ್ಕರೆ ಕಾಯಿಲೆಯವರು. ಇವರ ದೇಹದಲ್ಲಿ ಅಲ್ಪಸ್ವಲ್ಪ ಇನ್ಸುಲಿನ್ ಉತ್ಪಾದನೆಯಾಗುತ್ತಿರುತ್ತದೆ. ಅನುವಂಶಿಕ ಹಿನ್ನೆಲೆ, ದೇಹಸ್ಥೂಲತೆ, ಆಲಸಿತನ, ಮಾನಸಿಕ ಒತ್ತಡ ಈ ರೀತಿಯ ಸಕ್ಕರೆ ಕಾಯಿಲೆಗೆ ಕಾರಣ. ಇವರು ಆಹಾರ ಪಥ್ಯ, ವ್ಯಾಯಾಮ ದೇಹದ ತೂಕ ನಿಯಂತ್ರಣದಿಂದ ಮತ್ತು ಇದರ ಜೊತೆಗೆ ಔಷಧಿ, ಇಂಜೆಕ್ಷನ್‌ಗಳಿಂದ ಕಾಯಿಲೆಯನ್ನು ಹತೋಟಿಯಲ್ಲಿ ಇರಿಸಿಕೊಳ್ಳಬಹುದು.

## ಸಕ್ಕರೆ ಕಾಯಿಲೆಯ ನಿರ್ವಹಣೆ



ಸಕ್ಕರೆ ಕಾಯಿಲೆ ಇರುವವರೂ ಇತರರಂತೆ ಆರೋಗ್ಯಭರಿತ ಜೀವನ ನಡೆಸಬಹುದು. ಮುಖ್ಯವಾಗಿ ನಾವು ನಮ್ಮಲ್ಲಿರುವ ಕಾಯಿಲೆಯನ್ನು ಒಪ್ಪಿಕೊಳ್ಳಬೇಕು. ಕಾಯಿಲೆ ಶಾಶ್ವತವಾಗಿ ನಿರ್ಮೂಲನೆಯಾಗುವುದಿಲ್ಲ ಎಂಬ ಸತ್ಯವನ್ನು ತಿಳಿದುಕೊಳ್ಳಬೇಕು. ಜಾಹಿರಾತುಗಳ ಆಮಿಷದ ಬಲೆಯಿಂದ ತಪ್ಪಿಸಿಕೊಳ್ಳಬೇಕು. ಕಾಯಿಲೆಯನ್ನು ಹದ್ದುಬಸ್ತಿನಲ್ಲಿ ಇರಿಸಿಕೊಳ್ಳುವ ವೈಜ್ಞಾನಿಕ (ಸತ್ಯ)ವಾದ ಹಾದಿಯನ್ನು ತುಳಿಯಬೇಕು. ಆಗ ಎಲ್ಲ ಸಕ್ಕರೆ ಕಾಯಿಲೆಯವರು ಯಾವುದೇ ಅಪಾಯಕ್ಕೊಳಗಾಗದೆ, ಆರೋಗ್ಯವಂತರಾಗಿ ಬದುಕುವ ಅವಕಾಶ ದೊರೆಯುತ್ತದೆ. ಸಕ್ಕರೆ ಕಾಯಿಲೆ ಎಂಬ ನಾವೆಯಲ್ಲಿ ಪಯಣಿಸುವಾಗ, ಕಾಯಿಲೆ ಹತೋಟಿ ಇಡುವ ಪಟ್ಟು ಕರಗತವಾದಲ್ಲಿ ದೋಣಿ ಸುಗಮವಾಗಿ ಸಾಗುತ್ತಾ ದೂರ ತೀರ ಸೇರುವುದರಲ್ಲಿ ಸಂದೇಹವೇ ಇಲ್ಲ.

ಸಕ್ಕರೆ ಕಾಯಿಲೆಗೆ ಔಷಧಿ, ಇಂಜೆಕ್ಷನ್‌ಗಳೇ ರಾಮಬಾಣವಲ್ಲ. ಸುಮಾರು ಶೇಕಡಾ 60 ರಿಂದ 70 ರಷ್ಟು ಸಕ್ಕರೆ ಕಾಯಿಲೆಯವರು ಯಾವುದೇ ಔಷಧಿ ಬಳಸದೆ ಕೇವಲ ಆಹಾರ ಪಥ್ಯ ಹಾಗೂ ವ್ಯಾಯಾಮದಿಂದ ತಮ್ಮ ಕಾಯಿಲೆಯನ್ನು ಹತೋಟಿಯಲ್ಲಿ ಇರಿಸಿಕೊಳ್ಳಬಲ್ಲರು. ಔಷಧಿಗಳು ಆಹಾರ ಪಥ್ಯ ಮತ್ತು ವ್ಯಾಯಾಮಕ್ಕೆ ಪೂರಕವಷ್ಟೇ ಹೊರತು ಔಷಧಿಗಳೇ ಕಾಯಿಲೆಗೆ ಮದ್ದಲ್ಲ.

**1. ಆಹಾರ ಪಥ್ಯ, 2. ವ್ಯಾಯಾಮ, 3. ಕಾಯಿಲೆ ಬಗ್ಗೆ ತಿಳುವಳಿಕೆ, 4. ಔಷಧಿ.**

## ಲಕ್ಷಣಗಳೇನು?

- ಪದೇ ಪದೇ ಮೂತ್ರ ವಿಸರ್ಜನೆ. ರಾತ್ರಿ ಮೂತ್ರ ವಿಸರ್ಜನೆಗೆ ಹಲವು ಬಾರಿ ಏಳಬೇಕಾಗುವುದು.
- ಅತಿಶಯವೆನಿಸುವಷ್ಟು ಹಸಿವಾಗುವುದು
- ಪದೇ ಪದೇ ಬಹಳ ಬಾಯಾರಿಕೆಯಾಗುವುದು
- ವಿಪರೀತ ಆಯಾಸ, ಚೈತನ್ಯ ಶಕ್ತಿ ಇಲ್ಲದಿರುವುದು

ಸಕ್ಕರೆ ಕಾಯಿಲೆ ಪೀಡಿತ ವಯಸ್ಕರು **8%**

- ದೇಹದ ಯಾವುದೇ ಭಾಗಗಳಲ್ಲಿ ನೋವು, ಚಳಕು, ಸೆಳೆತ, ಜೋಮು, ರಾತ್ರಿ ಕಾಲು ಹರಿಯುವುದು (ಸೇದುವುದು–ನೋವು) ಇತ್ಯಾದಿ
- ದೇಹದ ತೂಕದಲ್ಲಿ ಗಮನಾರ್ಹ ಏರಿಳಿತ
- ಚರ್ಮದಲ್ಲಿ, ಗುಹ್ಯಾಂಗದಲ್ಲಿ, ಸಂದುಗಳಲ್ಲಿ ಕಡಿತ, ತುರಿಕೆ, ಗಾಯ ಶುರು, ಕೀವು ಪದೇ ಪದೇ ಉಂಟಾಗುವುದು.
- ಮೂತ್ರ ವಿಸರ್ಜಿಸುವಾಗ ಉರಿ, ದೃಷ್ಟಿಮಂದತೆ, ಲೈಂಗಿಕ ನಿರಾಸಕ್ತಿ
- ವಿಸರ್ಜನೆಗೊಂಡ ಮೂತ್ರಕ್ಕೆ ವಿಪರೀತ ವಾಸನೆ ಇರುವುದು
- ಗರ್ಭಿಣಿಗೆ ಅತಿ ಹೆಚ್ಚು ತೂಕ– ಗಾತ್ರ ಇರುವ ಮಗು ಜನಿಸುವುದು
- ದೇಹದಲ್ಲಿ ಉಂಟಾದ ಗಾಯ ಮಾಯದಿರುವುದು. ಇಲ್ಲವೇ ಗಾಯ ಮಾಯಲು ಬಹಳ (ತಿಂಗಳುಗಟ್ಟಲೆ) ಸಮಯ ಬೇಕಾಗುವುದು.

ಸಕ್ಕರೆ ಕಾಯಿಲೆಯ ಸುಳಿವಿನ ಚಿಹ್ನೆಗಳು ಯಾರಿಗಾದರೂ ಇದ್ದರೆ, ಯಾವುದೇ ತೊಂದರೆ ನಿಮಗಿಲ್ಲದಿದ್ದರೂ ತಕ್ಷಣವೇ ವೈದ್ಯರನ್ನು ಕಂಡು ನಿಮ್ಮ ರಕ್ತ ಪರೀಕ್ಷೆ ಮಾಡಿಸಿಕೊಳ್ಳುವುದು ಅಗತ್ಯ. ದೇಹದೊಳಗೆ ಅವಿತುಕೊಂಡ ಕಾಯಿಲೆ ಬೇಗನೆ ಪತ್ತೆಯಾದರೆ, ನಿರ್ವಹಣೆ ಸುಲಭ. ಮುಂದಾಗಬಹುದಾದ ಗಂಡಾಂತರಗಳಿಂದಲೂ ಪಾರಾಗಬಹುದು.


ನಂ.1 ವಶೀಕರಣ ಮೋಡಿಗಾರರು – ದೈವಜ್ಞ ಪಂ. ಸಾಯಿದೀಕ್ಷಿತ್ ಗುರೂಜಿ – 9980174116



ದಕ್ಷಿಣ ಭಾರತದ ಜನರಲ್ಲಿ ಪ್ರಶಂಸೆಗಳಿಸಿರುವ ವಶೀಕರಣ ಮೋಡಿಗಾರರು

ಚಿಂತಿಸುವ ಅವಶ್ಯಕತೆ ಇಲ್ಲ. ಒಂದು ಫೋನ್‌ಕಾಲಿನಿಂದ ನಿಮ್ಮ ಜೀವನ ಬದಲಾಗುತ್ತದೆ. ಇವರು ನಿಮ್ಮ ನಗರದಲ್ಲಿ ಖಾಯಂ ಆಗಿ ನೆಲೆಸಿದ್ದಾರೆ.

ವಿ. ಸೂಚನೆ: ವಶೀಕರಣ ಸ್ಪೆಷಲಿಸ್ಟ್, ಸ್ತ್ರೀ ವಶೀಕರಣ ಪುರುಷ ವಶೀಕರಣ, ಮಾಟಮಂತ್ರ, ವಿದೇಶ ಪ್ರಯಾಣ, ಲೈಂಗಿಕ ಸಮಸ್ಯೆ, ಶತ್ರುಗಳ ನಾಶ ಹಾಗೂ ಹಲವಾರು ಸಮಸ್ಯೆಗಳಿಗೆ ಅಷ್ಟದಿಗ್ಬಂಧನ ಶಕ್ತಿ ತಾಂತ್ರಿಕ, ಮಾಂತ್ರಿಕ ಶಕ್ತಿ ಹಾಗೂ ಸರ್ವ ದೈವ ಶಕ್ತಿಗಳ ಮೂಲಕ ಕೇವಲ 5 ದಿನಗಳಲ್ಲಿ ಪರಿಹಾರ ಶತಃಸಿದ್ಧ.

ಸ್ತ್ರೀ ಪುರುಷ ವಶೀಕರಣಕ್ಕೆ, ಅಷ್ಟದಿಗ್ಬಂಧನ ಶಕ್ತಿಯಿಂದ ಬಗೆಹರಿಸಲಾಗುವುದು

ನೀವು ಇಷ್ಟ ಪಟ್ಟವರು ನಿಮ್ಮಂತೆ ಆಗಲು ಯಾರಿಂದಲೂ ಆಗದ ಕೆಲಸ ಕೆಲವೇ ಘಂಟೆಗಳಲ್ಲಿ ಸಾಧ್ಯ. ನಿಗೂಢ ಗುಪ್ತ ಸಮಸ್ಯೆಗಳೇನೆ ಇರಲಿ ತಕ್ಷಣದಲ್ಲಿ ಪರಿಹಾರ ಸೂಚಿಸುತ್ತಾರೆ.

ಸಮಸ್ಯೆಯನ್ನು ನೋಡಿ ಕರುಣೆ ತೋರಿಸುವುದು ಮನುಷ್ಯತ್ವ. ಅದೇ ಸಮಸ್ಯೆಗೆ ಪರಿಹಾರ ನೀಡುವುದು ದೈವತ್ವ...

ಸಮಸ್ಯೆಗಳಿಗೆ ಫೋನಿನ ಮೂಲಕ 100 ಕ್ಕೆ 101ರಷ್ಟು ಪರಿಹಾರ ಶತ:ಸಿದ್ಧ